ಪ್ರವಾಸಿ ಟ್ಯಾಕ್ಸಿ ಖರೀದಿ ಸೌಲಭ್ಯ

206 (554), ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ)

ಅ) ರಾಜ್ಯ ಪ್ರವಾಸೋದ್ಯಮ ಇಲಾಖೆಯ ವತಿಯಿಂದ ಪ್ರವಾಸಿ ಟ್ಯಾಕ್ಸಿ ಖರೀದಿ ಯೋಜನಾ ಸೌಲಭ್ಯದ ವಿವರಗಳು ಮತ್ತು ಫಲಾನುಭವಿಗಳ ಆಯ್ಕೆ ಕುರಿತು ನಿಗದಿಪಡಿಸಲಾಗಿರುವ ಮತ್ತು ಅನುಸರಿಸಲಾಗುತ್ತಿರುವ ಮಾನದಂಡಗಳ ವಿವರ ಒದಗಿಸುವುದು;

ಆ) ಕಳೆದ ಮೂರು ವರ್ಷಗಳಲ್ಲಿ ಒಟ್ಟು ಎಷ್ಟು ಜನ ಫಲಾನುಭವಿಗಳಿಗೆ ಯೋಜನಾ ಸೌಲಭ್ಯವನ್ನು ಒದಗಿಸಲಾಗಿದೆ; (ಜಿಲ್ಲಾವಾರು ಮತ್ತು ವಿಧಾನಸಭಾ ಕ್ಷೇತ್ರವಾರು ಸಂಖ್ಯಾ ವಿವರ ಒದಗಿಸುವುದು);

ಇ) ವಿಧಾನಸಭಾ ಕ್ಷೇತ್ರವಾರು ಫಲಾನುಭವಿಗಳ ಸಂಖ್ಯೆಯಲ್ಲಿ ತಾರತಮ್ಯ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸ್ಪಷ್ಟನೆ ನೀಡುವುದು; ಫಲಾನುಭವಿಗಳಿಗೆ ಸಕಾಲದಲ್ಲಿ ಸಾಲ ಸೌಲಭ್ಯವನ್ನು ಒದಗಿಸಿಕೊಡುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು?

ಶ್ರೀ ಆರ್.ವಿ.ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು)

ಅ) ಫಲಾನುಭವಿಗಳ ಆಯ್ಕೆ ಕುರಿತು ಅನುಸರಿಸುತ್ತಿರುವ ಮಾನದಂಡಗಳ ಮಾರ್ಗಸೂಚಿಯನ್ನು ಅನುಬಂಧ–1 ರಲ್ಲಿ ಒದಗಿಸಲಾಗಿದೆ.

ಆ) ಕಳೆದ ಮೂರು ವರ್ಷಗಳಲ್ಲಿ ಈ ಸೌಲಭ್ಯವನ್ನು ಪಡೆದಿರುವ ಫಲಾನುಭವಿಗಳ ವಿವರವನ್ನು ಅನುಬಂಧ–2 ರಲ್ಲಿ ಒದಗಿಸಲಾಗಿದೆ.

ಇ) ಇಲ್ಲ.

ಫಲಾನುಭವಿಗಳಿಗೆ ಇಲಾಖೆಯಿಂದ ಸಹಾಯಧನ ಮಾತ್ರ ವಿತರಿಸಲಾಗುತ್ತಿದೆ. ಸಾಲ ಸೌಲಭ್ಯವನ್ನು ಲೀಡ್ ಬ್ಯಾಂಕ್ ಗುರುತಿಸಿದ ಬ್ಯಾಂಕ್ ಮೂಲಕ ಒದಗಿಸಲಾಗುತ್ತಿದೆ.

ಅನುಬಂಧ–1

ಸರ್ಕಾರದ ಆದೇಶ ಸಂಖ್ಯೆ ಪ್ರಇ/204/ಪ್ರವಾಯೋ/2014
ದಿನಾಂಕ:13.11.2014ಕ್ಕೆ

ಅನುಬಂಧ–2

ಪ್ರವಾಸೋದ್ಯಮ ಇಲಾಖೆಯಲ್ಲಿ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕರಿಗೆ ಸಹಾಯಧನದೊಂದಿಗೆ ಪ್ರವಾಸಿ ಟ್ಯಾಕ್ಸಿ ಒದಗಿಸಲು ಮಾರ್ಗಸೂಚಿಗಳು

ಯೋಜನೆ:

- ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಲಘು ವಾಹನ ಚಾಲನಾ ಪರವಾನಗಿ ಹೊಂದಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ ಅರ್ಹ ನಿರುದ್ಯೋಗಿ ವಿದ್ಯಾವಂತ ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ ಕಲ್ಪಿಸಿಕೊಳ್ಳುವ ದೃಷ್ಟಿಯಿಂದ ಪ್ರವಾಸಿ ತಾಣಗಳಿಗೆ ಪ್ರವಾಸಿಗರನ್ನು ಕರೆದುಕೊಂಡು ಹೋಗಲು ಸಹಾಯಧನ ಮೂಲಕ ಪ್ರವಾಸಿ ಟ್ಯಾಕ್ಸಿಗಳನ್ನು ಒದಗಿಸುವುದು.

ಯೋಜನೆಯ ಘಟಕ ವೆಚ್ಚ:

ಫಲಾನುಭವಿಯು ಸ್ವ–ಇಚ್ಛೆಯಿಂದ ಯಾವುದೇ ಮಾದರಿಯ ವಾಹನವನ್ನು ಖರೀದಿಸಬಹುದು. ಈ ವಾಹನದ ಘಟಕ ವೆಚ್ಚದ ವಿವರವು ಕೆಳಕಂಡಂತಿದೆ.

- ಇಲಾಖೆಯ ಸಹಾಯಧನ – ₹ 2.00 ಲಕ್ಷಗಳು ಮಾತ್ರ.
- ಫಲಾನುಭವಿಯ ವಂತಿಗೆ – ವಾಹನದ ಒಟ್ಟು ವೆಚ್ಚದ ಶೇ.5 ರಷ್ಟು.
- ಬ್ಯಾಂಕ್ ಸಾಲ – ವಾಹನದ ಒಟ್ಟು ವೆಚ್ಚದಲ್ಲಿ ಉಳಿದ ಮೊತ್ತ.

ಜಿಲ್ಲಾವಾರು ಗುರಿ:

ಇಲಾಖೆಯಿಂದ ಪ್ರತಿ ಜಿಲ್ಲೆಗೆ ನಿಗಧಿಪಡಿಸಿದ ಅಭ್ಯರ್ಥಿಗಳ ಗುರಿಯನ್ನು ಜಿಲ್ಲಾಧಿಕಾರಿಗಳು ತಮ್ಮ ಜಿಲ್ಲೆಯ ತಾಲ್ಲೂಕುವಾರು ಜನಸಂಖ್ಯೆಗೆ ಅನುಗುಣವಾಗಿ ನಿಗಧಿಪಡಿಸುವುದು. ಈ ಗುರಿಯನ್ನು ಜಿಲ್ಲೆಯಲ್ಲಿರುವ ಲೀಡ್ ಬ್ಯಾಂಕ್ (ಡಿ.ಎಲ್.ಬಿ.ಸಿ.) ಗೆ ರವಾನಿಸಿ ಬ್ಯಾಂಕ್ ಸಾಲ ಮಂಜೂರು ಮಾಡಿಸಲು ಕ್ರಮ ವಹಿಸುವುದು.

ಪ್ರವಾಸಿ ಟ್ಯಾಕ್ಸಿ ವಿತರಣೆ ಪ್ರಕ್ರಿಯೆ ಕಾಲಾವಧಿ:

ಕ್ರ ಸಂ.	ಪ್ರಕ್ರಿಯೆ	ದಿನಾಂಕ
1	ಅರ್ಜಿ ಆಹ್ವಾನಿಸಲು ಪತ್ರಿಕಾ ಪ್ರಕಟಣೆ ಹೊರಡಿಸುವುದು	15.11.2014ರ ಒಳಗಾಗಿ
2	ಅರ್ಜಿ ವಿತರಣೆ	15.11.2014 ರಿಂದ 15.12.2014 ರವರೆಗೆ
3	ಅರ್ಜಿ ಸ್ವೀಕರಿಸುವುದು	15.11.2014 ರಿಂದ 15.12.2014 ರವರೆಗೆ
4	ಸ್ವೀಕರಿಸಿದ ಅರ್ಜಿಗಳ ಪರಿಶೀಲನೆ	16.12.2014 ರಿಂದ 31.12.2014 ರವರೆಗೆ
5	ಪರಿಶೀಲಿಸಿದ ಅರ್ಜಿಗಳ ಪಟ್ಟಿಯನ್ನು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಸಭೆ ಕರೆದು ಸಮಿತಿಯ ಮುಂದೆ ಮಂಡಿಸಿ ಫಲಾನುಭವಿಗಳನ್ನು ಆಯ್ಕೆ ಮಾಡುವುದು	01.01.2015 ರಿಂದ 07.01.2015 ರ ಒಳಗಾಗಿ
6	ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಣೆ ಹಾಗೂ ಆಕ್ಷೇಪಣೆ ಆಹ್ವಾನ	08.01.2015 ರಿಂದ 14.01.2015 ರ ಒಳಗಾಗಿ
7	ಸ್ವೀಕರಿಸಿದ ಆಕ್ಷೇಪಣೆಗಳ ಇತ್ಯರ್ಥಪಡಿಸುವುದು	15.01.2015 ರಿಂದ 22.01.2015 ರ ಒಳಗಾಗಿ
8	ಅಂತಿಮ ಫಲಾನುಭವಿಗಳ ಆಯ್ಕೆ ಪಟ್ಟಿ ಪ್ರಕಟಣೆ	23.01.2015 ರಿಂದ 25.01.2015 ರ ಒಳಗಾಗಿ
9	ಫಲಾನುಭವಿಗಳ ಪಟ್ಟಿಯನ್ನು ಬ್ಯಾಂಕ್ ಸಾಲ ಒದಗಿಸಲು ಬ್ಯಾಂಕ್‌ಗೆ ಸಲ್ಲಿಸುವುದು	27.01.2015 ರಿಂದ 31.01.2015 ರ ಒಳಗಾಗಿ
10	ಬ್ಯಾಂಕ್ ಸಾಲ ಮಂಜೂರಾದ ನಂತರ ಇಲಾಖೆಯ ಸಹಾಯಧನವನ್ನು ಬ್ಯಾಂಕ್‌ಗೆ ಜಮಾ ಮಾಡುವುದು	ಬ್ಯಾಂಕ್ ಸಾಲ ಮಂಜೂರಾದ ದಿನಾಂಕದಿಂದ 10 ದಿನದ

		ಒಳಗಾಗಿ
11	ಪ್ರವಾಸಿ ಟ್ಯಾಕ್ಸಿ ವಿತರಣೆ	28.02.2015 ರ ಒಳಗಾಗಿ
12	ಪ್ರವಾಸಿ ಟ್ಯಾಕ್ಸಿ ವಿತರಣೆ ಮಾಡಿರುವ ಬಗ್ಗೆ ಇಲಾಖೆಗೆ ವರದಿ ಸಲ್ಲಿಸಲು ಕೊನೆಯ ದಿನ	01.03.2015 ರ ಒಳಗಾಗಿ

ಆಯ್ಕೆ ಸಮಿತಿ:

ಫಲಾನುಭವಿಗಳ ಅರ್ಹತಾ ಪಟ್ಟಿ ಆಯ್ಕೆ ಮಾಡುವ ಸಮಿತಿ:

ಈ ಕೆಳಕಂಡ ಸದಸ್ಯರನ್ನೊಳಗೊಂಡ ಸಮಿತಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸುವುದು:

1. ಉಪ ವಿಭಾಗಾಧಿಕಾರಿಗಳು – ಅಧ್ಯಕ್ಷರು
2. ತಹಶೀಲ್ದಾರ್ (ಆಯಾ ಜಿಲ್ಲಾ ಕೇಂದ್ರ ಸ್ಥಾನದಲ್ಲಿರುವವರು)
3. ಉಪ ನಿರ್ದೇಶಕರು/ಸಹಾಯಕ ನಿರ್ದೇಶಕರು–ಸದಸ್ಯ ಕಾರ್ಯದರ್ಶಿಗಳು
4. ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ, ಡಿಎಸ್‌ಡಬ್ಲ್ಯು–ಸದಸ್ಯರು
5. ಜಿಲ್ಲಾ ಸಮಗ್ರ ಗಿರಿಜನ ಅಭಿವೃದ್ಧಿ ಅಧಿಕಾರಿ–ಸದಸ್ಯರು

ಆಯ್ಕೆ ವಿಧಾನ:

- ಜಿಲ್ಲಾಧಿಕಾರಿಗಳು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಸಭೆ ಕರೆದು ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ನಡೆಸುವುದು.
- ಫಲಾನುಭವಿಗಳ ಆಯ್ಕೆಯನ್ನು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯು ಯಾವ ಮಾನದಂಡ ಅನುಸರಿಸಿ ಆಯ್ಕೆ ಮಾಡಬೇಕೆಂಬ ಬಗ್ಗೆ ತೀರ್ಮಾನ ನೀಡುತ್ತದೆಯೋ ಅದರ ಪ್ರಕಾರ ಫಲಾನುಭವಿಗಳನ್ನು ಆಯ್ಕೆ ಮಾಡುವುದು.
- ಆಯಾ ಜಿಲ್ಲೆಯ ಅಭ್ಯರ್ಥಿಗಳ ಆಯ್ಕೆಯನ್ನು ಮುಕ್ತಾಯಗೊಳಿಸಿದ ನಂತರ ತಮ್ಮಲ್ಲಿರುವ ಉಳಿಕೆ ಅರ್ಜಿದಾರರ ಪಟ್ಟಿಯನ್ನು

"ಕಾಯ್ದಿರಿಸಿದ ಪಟ್ಟಿಯೆಂದು" ಪ್ರಕಟಿಸುವುದು. ಸದರಿ ಮಾಹಿತಿಯನ್ನು ಆಯಾ ಜಿಲ್ಲೆಯ ಉಪ ನಿರ್ದೇಶಕರು, ಸಹಾಯಕ ನಿರ್ದೇಶಕರು ಹಾಗೂ ಪ್ರವಾಸಿ ಅಧಿಕಾರಿಗಳು ತಮ್ಮ ಕಛೇರಿಯಲ್ಲಿ ಹೊಂದಿರತಕ್ಕದ್ದು.

ಫಲಾನುಭವಿಗಳ ಆಯ್ಕೆಯಲ್ಲಿ ಆದ್ಯತೆ ನೀಡಬೇಕಾದ ಅಂಶಗಳು:

- ಅಭ್ಯರ್ಥಿಯ ಕುಟುಂಬದಲ್ಲಿ ಯಾವ ಒಬ್ಬ ಸದಸ್ಯನು ಸರ್ಕಾರಿ ನೌಕರಿ ಹೊಂದಿಲ್ಲದೆ ಇರುವುದನ್ನು ಖಚಿತಪಡಿಸಿಕೊಳ್ಳಬೇಕು.
- ಈಗಾಗಲೇ ಕುಟುಂಬದ ಸದಸ್ಯನೊಬ್ಬನು ಇಲಾಖೆಯಿಂದ ಪ್ರವಾಸಿ ಟ್ಯಾಕ್ಸಿ ಪಡೆದಿದ್ದರೆ ಅದೇ ಕುಟುಂಬದ ಮತ್ತೊಬ್ಬ ಸದಸ್ಯನಿಗೆ ಈ ಅವಕಾಶ ನೀಡಬಾರದು.
- ಅಭ್ಯರ್ಥಿಗಳು ಸಲ್ಲಿಸಿರುವ ವರಮಾನ ಮಿತಿಯಂತೆ ಅರ್ಜಿಗಳನ್ನು ಕ್ರೋಢೀಕರಿಸಿ ಅತಿ ಕಡಿಮೆ ವರಮಾನ ನೀಡಿರುವ ಕಡು ಬಡವರನ್ನು ಆಯ್ಕೆ ಮಾಡುವ ಬಗ್ಗೆ ಸಮಿತಿಯಲ್ಲಿ ತೀರ್ಮಾನ ಕೈಗೊಳ್ಳಬೇಕು.

ವಾಹನ ಸಾಲ ಮೇಳ:

- ಪ್ರವಾಸಿ ಟ್ಯಾಕ್ಸಿ ಖರೀದಿಸಲು ಎಲ್ಲಾ ಜಿಲ್ಲೆಯಲ್ಲಿಯೂ ಫಲಾನುಭವಿಗಳಿಗೆ ಸೂಕ್ತವಾದ ಬ್ಯಾಂಕ್ ಸಾಲ ದೊರಕುವಂತೆ ಮಾಡಲು ಲೀಡ್ ಬ್ಯಾಂಕ್ ವ್ಯವಸ್ಥಾಪಕರೊಂದಿಗೆ ಹಾಗೂ ವಿವಿಧ ವಾಹನ ವಿಜನ್ಸಿಯವರೊಂದಿಗೆ ವಾಹನ ಸಾಲ ಮೇಳ ಜರುಗಿಸಿ ಸ್ಥಳದಲ್ಲಿ ಸಾಲ ಮಂಜೂರಿಸಿದ ಬ್ಯಾಂಕ್‌ಗಳಿಗೆ ಮಂಜೂರಾತಿ ಅನುಪಾತಕ್ಕೆ ಅನುಗುಣವಾಗಿ ಸಹಾಯಧನ ವಿತರಿಸುವುದು.

ಅರ್ಜಿದಾರರು ಹೊಂದಿರಬೇಕಾದ ಅರ್ಹತೆಗಳು:

ಸಹಾಯಧನದೊಂದಿಗೆ ಪ್ರವಾಸಿ ಟ್ಯಾಕ್ಸಿ ಖರೀದಿಸುವ ಯೋಜನೆಯ ಪ್ರಯೋಜನ ಪಡೆಯಲು ಅರ್ಜಿ ಸಲ್ಲಿಸಲು ಅರ್ಜಿದಾರರ ಈ ಕೆಳಕಂಡ ಅರ್ಹತೆಗಳನ್ನು ಹೊಂದಿರಬೇಕು.

ಅ) ಅರ್ಜಿದಾರರು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿಬೇಕು.

ಆ) ಅರ್ಜಿದಾರನ ವಯಸ್ಸು 20 ರಿಂದ 45 ವರ್ಷದೊಳಗಿರಬೇಕು.

ಇ) ಅರ್ಜಿದಾರರು ಕನಿಷ್ಟ 10ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು.

ಈ) ಅಭ್ಯರ್ಥಿಗಳು ಲಘು ವಾಹನ ಚಾಲನಾ ಪರವಾನಗಿ ಪಡೆದು ಕನಿಷ್ಠ ಒಂದು ವರ್ಷವಾಗಿರಬೇಕು. ಆಯ್ಕೆಯಾದ ಅಭ್ಯರ್ಥಿಗಳು ಮೂರು ತಿಂಗಳಲ್ಲಿ ವಾಹನ ಪರವಾನಗಿ ಬ್ಯಾಡ್ಜನ್ನು ಪಡೆಯತಕ್ಕದ್ದು.

ಉ) ಅರ್ಜಿದಾರರು ಯಾವ ಜಿಲ್ಲೆಯ ನಿವಾಸಿಯಾಗಿರುತ್ತಾರೋ ಅದೇ ಜಿಲ್ಲೆಯಲ್ಲಿ ಅರ್ಜಿ ಸಲ್ಲಿಸಬೇಕು.

ಊ) ಅರ್ಜಿದಾರರು ಯಾವ ಜಿಲ್ಲೆಯ ನಿವಾಸಿಯಾಗಿರುತ್ತಾರೋ ಅದೇ ಜಿಲ್ಲೆಯಲ್ಲಿ ಅರ್ಜಿ ಸಲ್ಲಿಸಬೇಕು.

ಋ) ಒಂದು ಕುಟುಂಬದಲ್ಲಿ ಒಬ್ಬರಿಗೆ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.

ೠ) ಲಘು ವಾಹನ ಚಾಲನಾ ಪರವಾನಗಿ ಹೊಂದಿರುವ ನಿರುದ್ಯೋಗಿ ಮಹಿಳಾ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಲು ಅವಕಾಶವಿರುತ್ತದೆ.

ಅರ್ಜಿದಾರರು ಸಲ್ಲಿಸಬೇಕಾದ ದಾಖಲೆಗಳು:

ಅ) ಜಿಲ್ಲಾಧಿಕಾರಿಗಳಿಂದ ಜಾಹೀರಾತು ಪ್ರಕಟಣೆಗೊಂಡ 30 ದಿನಗಳ ಒಳಗಾಗಿ ನಿಗದಿಪಡಿಸಿದ ಅರ್ಜಿ ನಮೂನೆಯನ್ನು ಭರ್ತಿ ಮಾಡಿ ಇತ್ತೀಚಿನ ಭಾವಚಿತ್ರದೊಂದಿಗೆ ದ್ವಿಪ್ರತಿಯಲ್ಲಿ ಸಲ್ಲಿಸಬೇಕು.

ಆ) ಪಡಿತರ ಚೀಟಿ/ಚುನಾವಣಾ ಗುರುತಿನ ಚೀಟಿ/ಆಧಾರ್ ಕಾರ್ಡ್‌ನ ಪ್ರತಿ

ಇ) ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿರುವ ಬಗ್ಗೆ ತಹಶೀಲ್ದಾರರಿಂದ ಪಡೆದುಕೊಂಡಿರುವ ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರದ ಪ್ರತಿ.

ಈ) ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಜನಾಂಗದವರಿಗೆ ನಿಯಮ ರೀತ್ಯ ಚಾಲ್ತಿಯಲ್ಲಿರುವ ಆದಾಯದ ಮಿತಿಗೆ ತಹಶೀಲ್ದಾರರಿಂದ ಪಡೆದುಕೊಂಡಿರುವ ಆದಾಯ ಪ್ರಮಾಣ ಪತ್ರದ ಪ್ರತಿ.

ಉ) ತಹಶೀಲ್ದಾರ್/ಮಹಾನಗರ ಪಾಲಿಕೆ/ನಗರ ಪಾಲಿಕೆ/ನಗರಸಭೆ/ಪುರಸಭೆ/ಗ್ರಾಮ ಪಂಚಾಯ್ತಿ/ಪಟ್ಟಣ ಪಂಚಾಯ್ತಿ–ಇವುಗಳಲ್ಲಿ ಅರ್ಜಿದಾರರಿಗೆ ಅನ್ವಯಿಸುವವರಿಂದ ಪಡೆದಿರುವ ವಾಸಸ್ಥಳ ದೃಢೀಕರಣ ಪತ್ರದ ಪ್ರತಿ.

ಊ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ/ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿ/ಗ್ರಾಮ ಪಂಚಾಯಿತಿ–ಇವುಗಳಿಂದ ಈ ರೀತಿಯ ಸೌಲಭ್ಯ ಪಡೆಯದೇ ಇರುವ ಬಗ್ಗೆ ಅವರಿಂದ ಪಡೆದಿರುವ ಪ್ರಸಕ್ತ ಸಾಲಿನ ದೃಢೀಕರಣ ಪತ್ರ.

ಋ) ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ/ಪರಿಶಿಷ್ಟ ಪಂಗಡದ ಅಭಿವೃದ್ಧಿ ನಿಗಮದಿಂದ ಈ ರೀತಿಯ ಸೌಲಭ್ಯ ಪಡೆಯದೇ ಇರುವ ಬಗ್ಗೆ ದೃಢೀಕರಣ ಪತ್ರ.

ೠ) ಖಾಯಂ ಲಘು ವಾಹನ ಚಾಲನಾ ಪರವಾನಗಿ ಪತ್ರ ಹಾಗೂ ಆರ್.ಟಿ.ಓ. ರವರಿಂದ ಪಡೆದಿರುವ ಡಿ.ಎಲ್. ಎಕ್ಸ್‌ಟ್ರಾಕ್ಟ್‌ಗಳನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು.

ಎ) ವಿದ್ಯಾರ್ಹತೆಯ ಬಗ್ಗೆ ಕನಿಷ್ಠ ಎಸ್.ಎಸ್.ಎಲ್.ಸಿ. ಯಲ್ಲಿ ಉತ್ತೀರ್ಣರಾಗಿರುವ ಅಂಕಪಟ್ಟಿಯ ಪ್ರತಿ.

ಏ) ಅರ್ಜಿದಾರರು ಕೇಂದ್ರ/ರಾಜ್ಯ ಸರ್ಕಾರಗಳ ಇಲಾಖೆಗಳಲ್ಲಿ ಅಥವಾ ನಿಗಮ ಮಂಡಳಿಗಳಲ್ಲಿ ಖಾಯಂ ಉದ್ಯೋಗ ಹೊಂದಿರುವ ಬಗ್ಗೆ ತಹಶೀಲ್ದಾರರು/ಮಹಾನಗರ ಪಾಲಿಕೆ/ನಗರ ಪಾಲಿಕೆ/ನಗರಸಭೆ/ ಪುರಸಭೆ/ಗ್ರಾಮ ಪಂಚಾಯ್ತಿ/ಪಟ್ಟಣ ಪಂಚಾಯ್ತಿ–ಯಿಂದ ಪಡೆದಿರುವ ಪ್ರಸಕ್ತ ಸಾಲಿನ ದೃಢೀಕರಣ ಪತ್ರದ ಪ್ರತಿ.

ಐ) ಅರ್ಜಿಯಲ್ಲಿ ಅಭ್ಯರ್ಥಿಗಳ ದೂರವಾಣಿ ಸಂಖ್ಯೆಗಳನ್ನು ನಮೂದಿಸುವುದು ಕಡ್ಡಾಯ.

ಒ) ಅಭ್ಯರ್ಥಿಗಳು ತಮ್ಮ ವಿರುದ್ಧ ಯಾವುದೇ ಕ್ರಿಮಿನಲ್ ಮೊಕದ್ದಮೆ ಇಲ್ಲದೇ ಇರುವ ಬಗ್ಗೆ ಆಯಾ ವ್ಯಾಪ್ತಿಯ ಪೊಲೀಸ್ ಠಾಣೆಯಿಂದ ಪೊಲೀಸ್ ನಿರಾಕ್ಷೇಪಣಾ ಪತ್ರ ಪಡೆದು ಸಲ್ಲಿಸುವುದು.

ಓ) ಅಭ್ಯರ್ಥಿಯು ಮೇಲಿನ ಎಲ್ಲಾ ದಾಖಲಾತಿಗಳನ್ನು ಗೆಜೆಟೆಡ್ ಅಧಿಕಾರಿಯಿಂದ ದೃಢೀಕರಿಸಿ ಸಲ್ಲಿಸತಕ್ಕದ್ದು.

ಔ) ಆಯ್ಕೆಯಾದ ಅಭ್ಯರ್ಥಿಗಳಿಂದ ತಮಗೆ ವಿತರಿಸುವ ಪ್ರವಾಸಿ ವಾಹನವನ್ನು ಯಾರಿಗೂ ಪರಬಾರೆ ಮಾಡುವುದಿಲ್ಲವೆಂದು ನೋಟರಿಯಿಂದ ಪ್ರಮಾಣೀಕರಿಸಿದ ₹ 50/–ರ ಬೆಲೆಯ ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪಡೆಯತಕ್ಕದ್ದು.

ಷರತ್ತುಗಳು:

ಅ) ಫಲಾನುಭವಿಯೇ ಸ್ವತಃ ಟ್ಯಾಕ್ಸಿಯನ್ನು ಓಡಿಸಬೇಕು ಹೊರತು ಬೇರೆಯವರಿಗೆ ಪರಬಾರೆ ಮಾಡುವಂತಿಲ್ಲ. ಒಂದು ವೇಳೆ ಪರಬಾರೆ ಮಾಡಿರುವುದು ಕಂಡುಬಂದಲ್ಲಿ ಟ್ಯಾಕ್ಸಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಜಿಲ್ಲಾಧಿಕಾರಿಗಳು ಆರ್.ಟಿ.ಓ.ಗಳಿಗೆ ಪತ್ರ ಮುಖೇನ ಸದರಿ ವಾಹನವನ್ನು

(05) ವರ್ಷಗಳವರೆಗೆ ಬೇರೆಯವರಿಗೆ ವರ್ಗಾವಣೆ ಮಾಡದಂತೆ ಕ್ರಮ ವಹಿಸುವುದು.

ಆ) ಪ್ರತಿ ವರ್ಷ ಫಲಾನುಭವಿಯು ಗಳಿಸಿದ ಆದಾಯದ ವಿವರಗಳನ್ನು ಜಿಲ್ಲಾ ಮಟ್ಟದ ಇಲಾಖೆಯ ಕಛೇರಿಗೆ ನೀಡುವುದು.

ಇ) ಫಲಾನುಭವಿಯು ತೆಗೆದುಕೊಳ್ಳುವ ಬ್ಯಾಂಕಿನ ಸಾಲದ ಮೊತ್ತವನ್ನು ನಿರಂತರವಾಗಿ ಮರುಪಾವತಿ ಮಾಡುವುದು.

ಈ) ಆಯ್ಕೆಯಾದ ಅಭ್ಯರ್ಥಿಯು ಯಾವುದೇ ಕಾರಣಕ್ಕೂ ಪ್ರವಾಸಿ ಟ್ಯಾಕ್ಸಿಯನ್ನು ಪಡೆದ ದಿನಾಂಕದಿಂದ ಮುಂದಿನ (05) ವರ್ಷಗಳವರೆಗೆ ಇತರರಿಗೆ ಮಾರಾಟ/ಪರಬಾರೆ/ಬಾಡಿಗೆಗೆ/ಸ್ವಂತದವರಿಗೆ ನೀಡುವಂತಿಲ್ಲ.

ಉ) ಫಲಾನುಭವಿಗಳು ಪ್ರವಾಸಿಗರೊಡನೆ ಉತ್ತಮ ನಡವಳಿಕೆಯಿಂದ ವರ್ತಿಸುವುದು. ಕನ್ನಡ ಭಾಷಾ ಜ್ಞಾನ ಹಾಗೂ ಇತರೆ ಭಾಷೆಗಳ ಪರಿಣಿತಿ, ಪ್ರವಾಸಿ ಸ್ಥಳಗಳ ಪರಿಚಯ ಮುಂತಾದ ವಿಷಯಗಳ ಬಗ್ಗೆ ಸಾಮಾನ್ಯ ಜ್ಞಾನ ಹೊಂದಿದ್ದರೆ ಅನುಕೂಲವಾಗುವುದು.

ಬ್ರಾಂಡಿಂಗ್:

- ಫಲಾನುಭವಿಗಳು ಖರೀದಿಸುವ ಯಾವುದೇ ಮಾದರಿಯ ವಾಹನವನ್ನು ಪ್ರವಾಸಿಗರು ಪ್ರವಾಸೋದ್ಯಮ ಇಲಾಖೆಯ ವಾಹನವೆಂದು ಗುರುತಿಸಲು ಏಕರೂಪತೆ ಕಾಣಲು ವಾಹನದ ಬಣ್ಣವು ಕೆಂಪು ಬಣ್ಣ (ರೆಡ್)ವುಳ್ಳದಾಗಿರಬೇಕು. ಪ್ರವಾಸೋದ್ಯಮ ಇಲಾಖೆಯ ಲೋಗೋ ಹಾಗೂ ಪ್ರವಾಸಿ ತಾಣಗಳ ಚಿತ್ರಗಳನ್ನು ವಾಹನದ ಮೇಲೆ ಬಿತ್ತರಿಸಿರಬೇಕು. ಇದು ಕಡ್ಡಾಯವಾಗಿರುತ್ತದೆ.
- ವಾಹನದ ಬ್ರಾಂಡಿಂಗ್ ಬಗ್ಗೆ ಮುಂದಿನ ಆದೇಶ ನೀಡಲಾಗುವುದು.

ಅಧೀನ ಕಛೇರಿಗಳ ಜವಾಬ್ದಾರಿಗಳು:

- ಪ್ರವಾಸಿ ಟ್ಯಾಕ್ಸಿ ವಿತರಣೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ಪ್ರತಿ ಪ್ರಕ್ರಿಯೆ ಕೈಗೊಂಡ ಬಗ್ಗೆ 15 ದಿನಗಳಿಗೆ ಒಮ್ಮೆ ಇಲಾಖೆಗೆ ಕಡ್ಡಾಯವಾಗಿ ಜಿಲ್ಲಾಧಿಕಾರಿಗಳ ಮೂಲಕ ವರದಿ ಸಲ್ಲಿಸುವುದು.

ವಿಶೇಷ ಸೂಚನೆ:

- ಈ ಕಾರ್ಯಕ್ರಮವನ್ನು ನಿಗಧಿತ ಸಮಯದಲ್ಲಿ ಅನುಷ್ಠಾನಗೊಳಿಸಿ ಈ ಕಾರ್ಯಕ್ರಮದ ಪ್ರಯೋಜನವನ್ನು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಜನಾಂಗದವರಿಗೆ ತಲುಪಿಸಲು ನಿರ್ಲಕ್ಷ್ಯ ತೋರಿಸಿದ ಅಧಿಕಾರಿಯು "ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ, 2013ರ ಅಧ್ಯಾಯ–VI ಕಂಡಿಕೆ 24ರ ಅನ್ವಯ ದಂಡನೆಗೆ ಒಳಗಾಗುತ್ತಾರೆ.

ಅನುಬಂಧ-2

ಪ್ರವಾಸೋದ್ಯಮ ಇಲಾಖೆ ವತಿಯಿಂದ ಕಳೆದ ಮೂರು ವರ್ಷಗಳಲ್ಲಿ ಪ್ರವಾಸಿ ಟ್ಯಾಕ್ಸಿ ಸೌಲಭ್ಯ ಪಡೆದಿರುವ ಫಲಾನುಭವಿಗಳ ವಿವರ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ವಿಧಾನ ಸಭಾ ಕ್ಷೇತ್ರ/ತಾಲ್ಲೂಕಿನ ಹೆಸರು	ಫಲಾನುಭವಿಗಳ ಸಂಖ್ಯೆ			ಗ್ರ್ಯಾಂಡ್ ಟೋಟಲ್
			2011-12	2012-13	2013-14	
1	ಬೆಂಗಳೂರು (ನ)	ಯಲಹಂಕ (ವಿ ಸ ಕ್ಷೇತ್ರ)	4	–	–	4
		ಕೃಷ್ಣರಾಜಪುರ (ವಿ ಸ ಕ್ಷೇತ್ರ)	3	–	–	3
		ಬ್ಯಾಟರಾಯನಪುರ (ವಿ ಸ.ಕ್ಷೇತ್ರ)	3	–	–	3
		ಯಶವಂತಪುರ (ವಿ ಸ ಕ್ಷೇತ್ರ)	3	–	–	3
		ರಾಜರಾಜೇಶ್ವರಿ ನಗರ (ವಿ ಸ ಕ್ಷೇತ್ರ)	3	–	–	3
		ದಾಸರಹಳ್ಳಿ (ವಿ ಸ.ಕ್ಷೇತ್ರ)	3	–	–	3
		ಮಹಾಲಕ್ಷ್ಮೀಪುರಂ (ವಿ ಸ ಕ್ಷೇತ್ರ)	5	–	–	5
		ಮಲ್ಲೇಶ್ವರಂ (ವಿ ಸ ಕ್ಷೇತ್ರ)	3	–	–	3
		ಹೆಬ್ಬಾಳ (ವಿ.ಸ.ಕ್ಷೇತ್ರ)	3	–	–	3
		ಪುಲಿಕೇಶಿನಗರ (ವಿ ಸ ಕ್ಷೇತ್ರ)	3	–	–	3
		ಸರ್ವಜ್ಞನಗರ (ವಿ ಸ ಕ್ಷೇತ್ರ)	3	–	–	3
		ಸಿ ವಿ.ರಾಮನ್ ನಗರ (ವಿ ಸ.ಕ್ಷೇತ್ರ)	2	–	–	2
		ಶಿವಾಜಿನಗರ (ವಿ ಸ.ಕ್ಷೇತ್ರ)	2	–	–	2
		ಶಾಂತಿನಗರ (ವಿ ಸ ಕ್ಷೇತ್ರ)	2	–	–	2
		ಗಾಂಧಿನಗರ (ವಿ ಸ ಕ್ಷೇತ್ರ)	4	–	–	4
		ರಾಜಾಜಿನಗರ (ವಿ ಸ ಕ್ಷೇತ್ರ)	3	–	–	3
		ಗೋವಿಂದರಾಜನಗರ (ವಿ ಸ.ಕ್ಷೇತ್ರ)	5	–	–	5
		ವಿಜಯನಗರ (ವಿ ಸ ಕ್ಷೇತ್ರ)	3	–	–	3
		ಚಾಮರಾಜಪೇಟೆ (ವಿ ಸ ಕ್ಷೇತ್ರ)	4	–	–	4
		ಚಿಕ್ಕಪೇಟೆ (ವಿ ಸ ಕ್ಷೇತ್ರ)	2	–	–	2
		ಬಸವನಗುಡಿ (ವಿ ಸ ಕ್ಷೇತ್ರ)	3	–	–	3
		ಪದ್ಮನಾಭನಗರ (ವಿ ಸ ಕ್ಷೇತ್ರ)	3	–	–	3
		ಬಿ.ಟಿ.ಎಂ.ಲೇಔಟ್ (ವಿ ಸ ಕ್ಷೇತ್ರ)	2	–	–	2
		ಜಯನಗರ (ವಿ ಸ.ಕ್ಷೇತ್ರ)	3	–	–	3
		ಮಹದೇವಪುರ (ವಿ.ಸ ಕ್ಷೇತ್ರ)	3	–	–	3
		ಬೊಮ್ಮನಹಳ್ಳಿ (ವಿ.ಸ.ಕ್ಷೇತ್ರ)	3	–	–	3
		ಬೆಂಗಳೂರು ದಕ್ಷಿಣ (ವಿ ಸ ಕ್ಷೇತ್ರ)	3	–	–	3
		ಆನೇಕಲ್ (ವಿ ಸ ಕ್ಷೇತ್ರ)	5	–	–	5

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ವಿಧಾನ ಸಭಾ ಕ್ಷೇತ್ರ/ತಾಲ್ಲೂಕಿನ ಹೆಸರು	ಫಲಾನುಭವಿಗಳ ಸಂಖ್ಯೆ			ಗ್ರ್ಯಾಂಡ್ ಟೋಟಲ್
			2011-12	2012-13	2013-14	
2	ಬೆಂಗಳೂರು (ಗ್ರಾ)	ಹೊಸಕೋಟೆ (ವಿ.ಸ.ಕ್ಷೇತ್ರ)	5	–	–	5
		ದೊಡ್ಡಬಳ್ಳಾಪುರ (ವಿ.ಸ ಕ್ಷೇತ್ರ)	5	–	–	5
		ದೇವನಹಳ್ಳಿ (ವಿ.ಸ ಕ್ಷೇತ್ರ)	6	–	–	6
		ನೆಲಮಂಗಲ (ವಿ.ಸ.ಕ್ಷೇತ್ರ)	5	–	–	5
3	ರಾಮನಗರ	ರಾಮನಗರ (ತಾ)	9	5	40	54
		ಚನ್ನಪಟ್ಟಣ (ತಾ)	6	5	28	39
		ಕನಕಪುರ (ತಾ)	3	6	31	40
		ಮಾಗಡಿ (ತಾ)	–	3	16	19
4	ಚಿತ್ರದುರ್ಗ	ಚಿತ್ರದುರ್ಗ (ವಿ.ಸ ಕ್ಷೇತ್ರ)	20	–	–	20
		ಚಳ್ಳಕೆರೆ (ವಿ.ಸ.ಕ್ಷೇತ್ರ)	20	–	–	20
		ಹಿರಿಯೂರು (ವಿ.ಸ.ಕ್ಷೇತ್ರ)	7	–	–	7
		ಹೊಸದುರ್ಗ (ವಿ.ಸ ಕ್ಷೇತ್ರ)	3	–	–	3
		ಮೊಳಕಾಲ್ಮೂರು (ವಿ.ಸ ಕ್ಷೇತ್ರ)	2	–	–	2
		ಹೊಳಲ್ಕೆರೆ (ವಿ.ಸ.ಕ್ಷೇತ್ರ)	7	–	–	7
5	ದಾವಣಗೆರೆ	ದಾವಣಗೆರೆ (ವಿ.ಸ ಕ್ಷೇತ್ರ)	25	–	–	25
		ಚನ್ನಗಿರಿ (ವಿ ಸ.ಕ್ಷೇತ್ರ)	7	–	–	7
		ಹರಪನಹಳ್ಳಿ (ವಿ.ಸ.ಕ್ಷೇತ್ರ)	4	–	–	4
		ಜಗಳೂರು (ವಿ.ಸ.ಕ್ಷೇತ್ರ)	5	–	–	5
		ಹರಿಹರ (ವಿ.ಸ.ಕ್ಷೇತ್ರ)	6	–	–	6
		ಹೊನ್ನಾಳಿ (ವಿ.ಸ.ಕ್ಷೇತ್ರ)	5	–	–	5
6	ಕೋಲಾರ	ಕೋಲಾರ (ತಾ)	31	29	54	114
		ಬಂಗಾರಪೇಟೆ (ತಾ)	2	4	5	11
		ಶ್ರೀನಿವಾಸಪುರ (ತಾ)	4	1	9	14
		ಮುಳಬಾಗಿಲು (ತಾ)	2	1	5	8
		ಮಾಲೂರು (ತಾ)	3	5	3	11
7	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ(ವಿ ಸ.ಕ್ಷೇತ್ರ)	11	11	–	22
		ಗುಡಿಬಂಡೆ (ವಿ ಸ.ಕ್ಷೇತ್ರ)	3	1	–	4
		ಗೌರಿಬಿದನೂರು (ವಿ.ಸ.ಕ್ಷೇತ್ರ)	7	7	–	14
		ಶಿಡ್ಲಘಟ್ಟ (ವಿ.ಸ ಕ್ಷೇತ್ರ)	6	2	–	8
		ಬಾಗೇಪಲ್ಲಿ (ವಿ ಸ.ಕ್ಷೇತ್ರ)	5	2		7
		ಚಿಂತಾಮಣಿ (ವಿ.ಸ.ಕ್ಷೇತ್ರ)	6	2	–	8

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ವಿಧಾನ ಸಭಾ ಕ್ಷೇತ್ರ/ತಾಲ್ಲೂಕಿನ ಹೆಸರು	ಫಲಾನುಭವಿಗಳ ಸಂಖ್ಯೆ			ಗ್ರ್ಯಾಂಡ್ ಟೋಟಲ್
			2011-12	2012-13	2013-14	
8	ಶಿವಮೊಗ್ಗ	ಶಿವಮೊಗ್ಗ (ಪಾ)	25	14	106	145
		ಭದ್ರಾವತಿ (ಪಾ)	–	6	28	34
		ಶಿಕಾರಿಪುರ (ಪಾ)	5	5	24	34
		ಸಾಗರ (ಪಾ)	–	1	4	5
		ಸೊರಬ (ಪಾ)	–	2	8	10
		ತೀರ್ಥಹಳ್ಳಿ (ಪಾ)	–	–	6	6
9	ತುಮಕೂರು	ತುಮಕೂರು ನಗರ (ವಿ.ಸ.ಕ್ಷೇತ್ರ)	7	8	–	15
		ತುಮಕೂರು ಗ್ರಾ (ವಿ ಸ.ಕ್ಷೇತ್ರ)	6	5	–	11
		ತುರುವೇಕೆರೆ (ವಿ ಸ ಕ್ಷೇತ್ರ)	2	3	–	5
		ಗುಬ್ಬಿ (ವಿ.ಸ.ಕ್ಷೇತ್ರ)	6	2	–	8
		ಕುಣಿಗಲ್ (ವಿ.ಸ.ಕ್ಷೇತ್ರ)	5	3	–	8
		ಮಧುಗಿರಿ (ವಿ.ಸ ಕ್ಷೇತ್ರ)	6	5	–	11
		ಪಾವಗಡ (ವಿ ಸ.ಕ್ಷೇತ್ರ)	7	3	–	10
		ತಿಪಟೂರು (ವಿ.ಸ.ಕ್ಷೇತ್ರ)	1	2	–	3
		ಚಿಕ್ಕನಾಯಕನಹಳ್ಳಿ (ವಿ ಸ.ಕ್ಷೇತ್ರ)	4	3	–	7
		ಶಿರಾ (ವಿ ಸ.ಕ್ಷೇತ್ರ)	5	3	–	8
		ಕೊರಟಗೆರೆ (ವಿ ಸ ಕ್ಷೇತ್ರ)	6	5	–	11
10	ಚಿಕ್ಕಮಗಳೂರು	ಚಿಕ್ಕಮಗಳೂರು (ಪಾ)	18	6	–	24
		ಮೂಡಿಗೆರೆ (ಪಾ)	4	1	–	5
		ಕಡೂರು (ಪಾ)	1	7	–	8
		ತರೀಕೆರೆ (ಪಾ)	2	2	–	4
		ಶೃಂಗೇರಿ (ಪಾ)	1	–	–	1
		ಕೊಪ್ಪ	–	1	–	1
		ಎನ್.ಆರ್ ಪುರ	–	–	–	–
11	ದಕ್ಷಿಣ ಕನ್ನಡ	ಮಂಗಳೂರು (ಪಾ)	10	8	48	66
		ಬಂಟ್ವಾಳ (ಪಾ)	5	3	27	35
		ಪುತ್ತೂರು (ಪಾ)	–	1	16	17
		ಬೆಳ್ತಂಗಡಿ (ಪಾ)	5	1	9	15
		ಸುಳ್ಯ (ಪಾ)	1	–	6	7

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ವಿಧಾನ ಸಭಾ ಕ್ಷೇತ್ರ/ತಾಲ್ಲೂಕಿನ ಹೆಸರು	ಫಲಾನುಭವಿಗಳ ಸಂಖ್ಯೆ			ಗ್ರ್ಯಾಂಡ್ ಟೋಟಲ್
			2011-12	2012-13	2013-14	
12	ಉಡುಪಿ	ಉಡುಪಿ (ವಿ ಸ.ಕ್ಷೇತ್ರ)	5	3	21	29
		ಕಾಪು (ವಿ ಸ.ಕ್ಷೇತ್ರ)	2	1	12	15
		ಬ್ರಹ್ಮಾವರ (ವಿ.ಸ.ಕ್ಷೇತ್ರ)	–	–	2	2
		ಕುಂದಾಪುರ (ವಿ.ಸ.ಕ್ಷೇತ್ರ)	1	1	18	20
		ಬೈಂದೂರು (ವಿ.ಸ.ಕ್ಷೇತ್ರ)	2	1	7	10
		ಕಾರ್ಕಳ (ವಿ ಸ.ಕ್ಷೇತ್ರ)	–	1	11	12
13	ಹಾಸನ	ಹಾಸನ (ವಿ.ಸ ಕ್ಷೇತ್ರ)	6	4	–	10
		ಬೇಲೂರು (ವಿ ಸ.ಕ್ಷೇತ್ರ)	3	2	–	5
		ಹೊಳೇನರಸೀಪುರ (ವಿ.ಸ ಕ್ಷೇತ್ರ)	11	2	–	13
		ಅರಕಲಗೂಡು (ವಿ ಸ.ಕ್ಷೇತ್ರ)	2	4	–	6
		ಶ್ರವಣಬೆಳಗೊಳ (ವಿ.ಸ.ಕ್ಷೇತ್ರ)	7	4	–	11
		ಅರಸೀಕೆರೆ (ವಿ ಸ ಕ್ಷೇತ್ರ)	3	6	–	9
		ಸಕಲೇಶಪುರ-ಆಲೂರು (ವಿ.ಸ ಕ್ಷೇತ್ರ)	2	2	–	4
14	ಕೊಡಗು	ಮಡಿಕೇರಿ (ತಾ)	2	2	–	4
		ವಿರಾಜಪೇಟೆ (ತಾ)	2	–	–	2
		ಸೋಮವಾರಪೇಟೆ (ತಾ)	7	3	–	10
15	ಮಂಡ್ಯ	ಮಂಡ್ಯ (ವಿ ಸ ಕ್ಷೇತ್ರ)	5	4	–	9
		ಮದ್ದೂರು (ವಿ.ಸ ಕ್ಷೇತ್ರ)	3	2	–	5
		ಮಳವಳ್ಳಿ (ವಿ.ಸ ಕ್ಷೇತ್ರ)	5	4	–	9
		ಶ್ರೀರಂಗಪಟ್ಟಣ (ವಿ.ಸ ಕ್ಷೇತ್ರ)	3	2	–	5
		ಮೇಲುಕೋಟೆ (ವಿ ಸ.ಕ್ಷೇತ್ರ)	3	3	–	6
		ನಾಗಮಂಗಲ (ವಿ.ಸ.ಕ್ಷೇತ್ರ)	4	1	–	5
		ಕೆ.ಆರ್.ಪೇಟೆ (ವಿ.ಸ.ಕ್ಷೇತ್ರ)	3	1	–	4
16	ಮೈಸೂರು	ಮೈಸೂರು (ತಾ)	45	21	–	66
		ಹುಣಸೂರು (ತಾ)	6	5	–	11
		ಹೆ.ಡಿ.ಕೋಟೆ (ತಾ)	5	4	–	9
		ನಂಜನಗೂಡು (ತಾ)	3	5	–	8
		ಕೆ ಆರ್ ನಗರ (ತಾ)	5	–	–	5
		ಟಿ.ನರಸೀಪುರ (ತಾ)	5	4	–	9
		ಪಿರಿಯಾಪಟ್ಟಣ (ತಾ)	3	–	–	3

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ವಿಧಾನ ಸಭಾ ಕ್ಷೇತ್ರ/ತಾಲ್ಲೂಕಿನ ಹೆಸರು	ಫಲಾನುಭವಿಗಳ ಸಂಖ್ಯೆ			ಗ್ರ್ಯಾಂಡ್ ಟೋಟಲ್
			2011-12	2012-13	2013-14	
17	ಚಾಮರಾಜನಗರ	ಚಾಮರಾಜನಗರ (ತಾ)	12	5	–	17
		ಕೊಳ್ಳೇಗಾಲ (ತಾ)	8	3	–	11
		ಗುಂಡ್ಲುಪೇಟೆ (ತಾ)	5	2	–	7
		ಯಳಂದೂರು (ತಾ)	8	10	–	18
18	ಬೆಳಗಾವಿ	ಅಥಣಿ (ವಿ ಸ ಕ್ಷೇತ್ರ)	2	3	–	5
		ಕಾಗವಾಡ (ವಿ ಸ ಕ್ಷೇತ್ರ)	–	–	–	–
		ರಾಯಬಾಗ (ವಿ.ಸ.ಕ್ಷೇತ್ರ)	3	–	–	3
		ಚಿಕ್ಕೋಡಿ (ವಿ ಸ ಕ್ಷೇತ್ರ)	22	10	–	32
		ಹುಕ್ಕೇರಿ (ವಿ ಸ ಕ್ಷೇತ್ರ)	1	7	–	8
		ಬೆಳಗಾವಿ (ದಕ್ಷಿಣ) (ವಿ ಸ ಕ್ಷೇತ್ರ)	3	–	–	3
		ಬೆಳಗಾವಿ (ಉತ್ತರ) (ವಿ ಸ.ಕ್ಷೇತ್ರ)	9	3	–	12
		ಬೆಳಗಾವಿ (ಗ್ರಾಮೀಣ) (ವಿ ಸ ಕ್ಷೇತ್ರ)	10	3	–	13
		ಬೈಲಹೊಂಗಲ (ವಿ ಸ ಕ್ಷೇತ್ರ)	2	2	–	4
		ಸವದತ್ತಿ ಯಲ್ಲಮ್ಮ (ವಿ ಸ ಕ್ಷೇತ್ರ)	2	1	–	3
		ಖಾನಾಪುರ (ವಿ ಸ ಕ್ಷೇತ್ರ)	1	2	–	3
		ಗೋಕಾಕ (ವಿ ಸ ಕ್ಷೇತ್ರ)	13	8	–	21
		ಯಮಕನಮರಡಿ (ವಿ ಸ ಕ್ಷೇತ್ರ)	–	–	–	–
		ಅರಬಾವಿ (ವಿ ಸ ಕ್ಷೇತ್ರ)	–	–	–	–
		ರಾಮದುರ್ಗ (ವಿ ಸ.ಕ್ಷೇತ್ರ)	–	4	–	4
19	ವಿಜಯಪುರ	ವಿಜಯಪುರ (ವಿ ಸ ಕ್ಷೇತ್ರ)	22	7	–	29
		ನಾಗರಾಣಾ (ವಿ ಸ.ಕ್ಷೇತ್ರ)	9	4	–	13
		ಬಬಲೇಶ್ವರ (ವಿ ಸ.ಕ್ಷೇತ್ರ)	4	2	–	6
		ಇಂಡಿ (ವಿ.ಸ.ಕ್ಷೇತ್ರ)	–	2	–	2
		ಸಿಂಧಗಿ (ವಿ ಸ ಕ್ಷೇತ್ರ)	–	–	–	–
		ಬಸವನಬಾಗೇವಾಡಿ (ವಿ ಸ.ಕ್ಷೇತ್ರ)	3	4	–	7
		ದೇವರಹಿಪ್ಪರಗಿ (ವಿ ಸ ಕ್ಷೇತ್ರ)	1	2	–	3
		ಮುದ್ದೇಬಿಹಾಳ (ವಿ ಸ ಕ್ಷೇತ್ರ)	3	2	–	5
20	ಬಾಗಲಕೋಟೆ	ಬಾಗಲಕೋಟೆ (ತಾ)	18	11	–	29
		ಬಾದಾಮಿ (ತಾ)	3	1	–	4
		ಹುನಗುಂದ (ತಾ)	4	3	–	7
		ಬೀಳಗಿ (ತಾ)	3	2	–	5

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ವಿಧಾನ ಸಭಾ ಕ್ಷೇತ್ರ/ತಾಲ್ಲೂಕಿನ ಹೆಸರು	ಫಲಾನುಭವಿಗಳ ಸಂಖ್ಯೆ			ಗ್ರ್ಯಾಂಡ್ ಟೋಟಲ್
			2011-12	2012-13	2013-14	
		ಮುಧೋಳ(ತಾ)	3	4	–	7
		ಜಮಖಂಡಿ (ತಾ)	1	–	–	1
21	ಧಾರವಾಡ	ನವಲಗುಂದ (ವಿ ಸ ಕ್ಷೇತ್ರ)	–	1	3	4
		ಕುಂದಗೋಳ (ವಿ ಸ ಕ್ಷೇತ್ರ)	–	–	4	4
		ಧಾರವಾಡ-ಗ್ರಾಮಾಂತರ (ವಿ ಸ ಕ್ಷೇತ್ರ)	5	3	9	17
		ಹುಬ್ಬಳ್ಳಿ-ಧಾರವಾಡ(ಪೂರ್ವ) (ವಿ ಸ ಕ್ಷೇತ್ರ)	5	1	18	24
		ಹುಬ್ಬಳ್ಳಿ-ಧಾರವಾಡ(ಕೇಂದ್ರ) (ವಿ ಸ ಕ್ಷೇತ್ರ)	1	1	16	18
		ಹುಬ್ಬಳ್ಳಿ-ಧಾರವಾಡ(ಪಶ್ಚಿಮ) (ವಿ ಸ ಕ್ಷೇತ್ರ)	6	–	6	12
		ಕಲಘಟಗಿ(ವಿ ಸ ಕ್ಷೇತ್ರ)	2	1	7	10
22	ಗದಗ	ಗದಗ (ತಾ)	9	6	–	15
		ರೋಣ (ತಾ)	4	2	–	6
		ಮುಂಡರಗಿ (ತಾ)	2	2	–	4
		ನರಗುಂದ (ತಾ)	–	1	–	1
		ಶಿರಹಟ್ಟಿ (ತಾ)	3	1	–	4
23	ಹಾವೇರಿ	ಹಾನಗಲ್ (ತಾ)	12	9	–	21
		ಬ್ಯಾಡಗಿ(ತಾ)	–	–	–	–
		ರಾಣೆಬೆನ್ನೂರು (ತಾ)	5	4	–	9
		ಸವಣೂರು-(ತಾ)	2	–	–	2
		ಹಾನಗಲ್ (ತಾ)	4	1	–	5
		ಶಿಗ್ಗಾಂವಿ (ತಾ)	–	1	–	1
		ಹಿರೇಕೆರೂರ (ತಾ)	7	5	–	12
24	ಉತ್ತರ ಕನ್ನಡ	ಕಾರವಾರ-(ತಾ)	3	1	41	45
		ಅಂಕೋಲಾ (ತಾ)	2	1	19	22
		ಕುಮಟಾ (ತಾ)	–	1	19	20
		ಹೊನ್ನಾವರ- (ತಾ)	–	–	10	10
		ಭಟ್ಕಳ (ತಾ)	1	1	24	26
		ಶಿರಸಿ (ತಾ)	4	2	18	24
		ಯಲ್ಲಾಪುರ-(ತಾ)	1	1	10	12
		ಮುಂಡಗೋಡ (ತಾ)	1	1	21	23
		ಸಿದ್ದಾಪುರ (ತಾ)	1	–	7	8
		ಪಳೆಯಾಳ (ತಾ)	–	1	33	34
		ಜೋಯಿಡಾ (ತಾ)	–	–	3	3

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ವಿಧಾನ ಸಭಾ ಕ್ಷೇತ್ರ/ತಾಲ್ಲೂಕಿನ ಹೆಸರು	ಫಲಾನುಭವಿಗಳ ಸಂಖ್ಯೆ			ಗ್ರ್ಯಾಂಡ್ ಟೋಟಲ್
			2011-12	2012-13	2013-14	
25	ಬಳ್ಳಾರಿ	ಬಳ್ಳಾರಿ (ವಿ.ಸ.ಕ್ಷೇತ್ರ)	27	12	–	39
		ಹೊಸಪೇಟೆ (ವಿ.ಸ.ಕ್ಷೇತ್ರ)	28	16	–	44
		ಸಂಡೂರು (ವಿ.ಸ.ಕ್ಷೇತ್ರ)	1	0	–	1
		ಹಗರಿ ಬೊಮ್ಮನಹಳ್ಳಿ (ವಿ.ಸ.ಕ್ಷೇತ್ರ)	7	10	–	17
		ಹೂವಿನ ಹಡಗಲಿ (ವಿ.ಸ.ಕ್ಷೇತ್ರ)	3	3	–	6
		ಕೂಡ್ಲಿಗಿ (ವಿ.ಸ.ಕ್ಷೇತ್ರ)	5	1	–	6
		ಸಿರುಗುಪ್ಪ (ವಿ.ಸ.ಕ್ಷೇತ್ರ)	2	1	–	3
		ಕಂಪ್ಲಿ (ವಿ.ಸ.ಕ್ಷೇತ್ರ)	–	–	–	–
26	ಬೀದರ್	ಬೀದರ್ (ವಿ.ಸ.ಕ್ಷೇತ್ರ)	23	10	–	33
		ಔರಾದ್ (ವಿ.ಸ.ಕ್ಷೇತ್ರ)	11	4	–	15
		ಭಾಲ್ಕಿ (ವಿ.ಸ.ಕ್ಷೇತ್ರ)	6	6	–	12
		ಬಸವಕಲ್ಯಾಣ (ವಿ.ಸ.ಕ್ಷೇತ್ರ)	1	2	–	3
		ಹುಮನಾಬಾದ್ (ವಿ.ಸ.ಕ್ಷೇತ್ರ)	6	5	–	11
27	ಕಲಬುರಗಿ	ಕಲಬುರಗಿ (ವಿ.ಸ.ಕ್ಷೇತ್ರ)	58	34	–	92
		ಚಿತ್ತಾಪುರ (ವಿ.ಸ.ಕ್ಷೇತ್ರ)	4	3	–	7
		ಅಫಜಲಪುರ (ವಿ.ಸ.ಕ್ಷೇತ್ರ)	4	–	–	4
		ಚಿಂಚೋಳಿ (ವಿ.ಸ.ಕ್ಷೇತ್ರ)	1	1	–	2
		ಆಳಂದ (ವಿ.ಸ.ಕ್ಷೇತ್ರ)	3	8	–	11
		ಚಿತ್ತಾಪುರ (ವಿ.ಸ.ಕ್ಷೇತ್ರ)	3	1	–	4
		ಸೇಡಂ (ವಿ.ಸ.ಕ್ಷೇತ್ರ)	1	–	–	1
28	ಯಾದಗಿರಿ	–	–	–	–	–
29	ರಾಯಚೂರು	ರಾಯಚೂರು (ತಾ)	29	12	–	41
		ಸಿಂಧನೂರು (ತಾ)	1	4	–	5
		ಮಾನ್ವಿ (ತಾ)	5	6	–	11
		ಲಿಂಗಸುಗೂರ (ತಾ)	7	2	–	9
		ದೇವದುರ್ಗ (ತಾ)	18	12	–	30

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ವಿಧಾನ ಸಭಾ ಕ್ಷೇತ್ರ/ತಾಲ್ಲೂಕಿನ ಹೆಸರು	ಫಲಾನುಭವಿಗಳ ಸಂಖ್ಯೆ			ಗ್ರ್ಯಾಂಡ್ ಟೋಟಲ್
			2011-12	2012-13	2013-14	
30	ಕೊಪ್ಪಳ	ಕೊಪ್ಪಳ (ತಾ)	14	9	-	23
		ಯಲಬುರ್ಗಾ (ತಾ)	3	8	-	11
		ಗಂಗಾವತಿ (ತಾ)	7	9	-	16
		ಕುಷ್ಟಗಿ (ತಾ)	1	4	-	5
		ಒಟ್ಟು	1137	614	812	2563
ಮೇಲ್ಕಾಡ ಕೋಷ್ಟಕದಲ್ಲಿ ತೋರಿಸಿರುವ ಜಿಲ್ಲೆಗಳಲ್ಲಿ 2012-13 ಹಾಗೂ 2013-14ನೇ ಸಾಲಿನ ಪ್ರವಾಸಿ ಟ್ಯಾಕ್ಸಿ ವಿತರಿಸಲು ಅರ್ಜಿ ಪರಿಶೀಲನೆ ಹಾಗೂ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ನಡೆಸಲಾಗುತ್ತಿದೆ.						